'ಶ್ರೀಯುತ ಡೊರ್ಸೆಟ್ ಅವರಿಗೆ,

ನಿಮ್ಮ ಮುದ್ದಿನ ಮಗ, ದೂರ, ಬಲುದೂರ ನಮ್ಮ ಒತ್ತೆಯಾಳಾಗಿದ್ದಾನೆ. ನೀವು ಅವನನ್ನು ಹುಡುಕುವುದು ನಿಷ್ಪ್ರಯೋಜಕ.

ನಿಮಗೆ ನಿಮ್ಮ ಮುದ್ದಿನ ಮಗ ಜೀವಂತವಾಗಿ ಬೇಕೆನಿಸಿದರೆ, ನೀವು ಒಂದೂವರೆ ಸಾವಿರ ಡಾಲರು ಒತ್ತೆ ಹಣವನ್ನು ಕೊಡಬೇಕಾಗುತ್ತದೆ. ಅದೂ ಕೂಡ ದೊಡ್ಡ ನೋಟುಗಳಲ್ಲಿ. ನಮಗೆ ಸಂಪರ್ಕಿಸಲು ಕೆಳಗಿನ ವಿಳಾಸವನ್ನು ಕೊಟ್ಟಿದ್ದೇವೆ.

ಸಮ್ಮಿಟ್‌ನಿಂದ ಪೊಪ್ಲಾರ್ ಕೋವ್‌ಗೆ ಹೋಗುವ ದಾರಿಯಲ್ಲಿ ಸುತ್ತ ಬೇಲಿ ಹಾಕಿರುವ ಒಂದು ಪಾಳುಬಿದ್ದ ಹೊಲವಿದೆ. ಅದರಲ್ಲಿ ಮೂರು ಮರಗಳಿವೆ. ಬೇಲಿ ಬದಿಯ ಒಂದು ಮರಕ್ಕೆ ಒಂದು ರಟ್ಟಿನ ಡಬ್ಬಿಯನ್ನು ಕಟ್ಟಲಾಗಿದೆ. ನೀವು ಕಳುಹಿಸುತ್ತಿರುವ ಪ್ರತಿನಿಧಿ ಒಬ್ಬಂಟಿಯಾಗಿರಬೇಕು. ರಾತ್ರಿ ಎಂಟೂವರೆಯಷ್ಟೊತ್ತಿಗೆ ಒತ್ತೆ ಹಣ ಅಥವಾ ನಿಮ್ಮ ಉತ್ತರವನ್ನು ಈ ಡಬ್ಬಿಯಲ್ಲಿಟ್ಟು ನಿಮ್ಮ ಪ್ರತಿನಿಧಿ ಹಿಂದಿರುಗಿ ನೋಡದೆ ಸುಮ್ಮನೆ ಹೊರಟು ಹೋಗಬೇಕು. ನೀವು ಬೇರೇನಾದರೂ ಚಾಲಾಕಿ ಉಪಯೋಗಿಸಿದರೆ ನಿಮ್ಮ ಮಗನನ್ನು ಶಾಶ್ವತವಾಗಿ ಕಳೆದುಕೊಳ್ಳಬೇಕಾಗುವುದು ಎಂದು ಕೂಡ ನಿಮ್ಮನ್ನು ಎಚ್ಚರಿಸುತ್ತಿದ್ದೇವೆ.

—ಏನೂ ಮಾಡಲು ಹೇಸದ ಇಬ್ಬರು ವ್ಯಕ್ತಿಗಳು.'

**8**

ಲಕೋಟೆಯ ಮೇಲೆ ಡೊರ್ಸೆಟನ ವಿಳಾಸ ಬರೆದು ಅದನ್ನು ನನ್ನ ಜೇಬಿನೊಳಗೆ ಇಳಿಸಿ ಹೊರಡುವಷ್ಟರಲ್ಲಿ ಹುಡುಗ ನನ್ನನ್ನು ಅಡ್ಡಗಟ್ಟಿದ.

'ಸ್ನೇಕ್—ಐ, ನೀನು ಹೊರಗೆ ಹೋದಾಗ ನಾನು ಆಡಬಹುದು ಎಂದಿದ್ದೆ ತಾನೆ?'

'ನನ್ನದೇನೂ ಅಭ್ಯಂತರಗಳಿಲ್ಲ ರೆಡ್ ಇಂಡಿಯನ್ ಚೀಫ್. ಅಂದ್ಹಾಗೆ ಯಾವ ಆಟ?'

'ರೆಡ್ ಇಂಡಿಯನ್ ಆಟ ಆಡಿ ನನಗೆ ಬೇಜಾರಾಗಿದೆ. ಇಂದು, ಶೀಘ್ರದಲ್ಲೇ ರೆಡ್ ಇಂಡಿಯನರು ದಾಳಿ ನಡೆಸುತ್ತಾರೆಂದು ಬಿಳಿಯರಿಗೆ ತಿಳಿಸುವ ಸ್ಕೌಟ್ ಆಟ ಆಡೋಣ ಎಂದುಕೊಂಡಿದ್ದೇನೆ.'

'ಈ ಆಟದಲ್ಲಿ ಏನೂ ಅಪಾಯಗಳಿಲ್ಲ ಎಂದುಕೊಂಡಿದ್ದೇನೆ. ಮಿಸ್ಟರ್ ಬಿಲ್ಲ್ ನಿನಗೆ ಸಹಾಯ ಮಾಡುತ್ತಾರೆ.' ನಾನೆಂದೆ.

'ನಾನು ಏನು ಮಾಡಬೇಕಾಗುತ್ತದೆ?' ಬಿಲ್ಲ್‌ನ ಮುಖದಲ್ಲಿ ಆತಂಕ ಎದ್ದು ಕಾಣುತ್ತಿತ್ತು.

'ನೀನು ನನ್ನ ಕುದುರೆಯಾಗಬೇಕು. ಕುದುರೆ ಇಲ್ಲದೆ ನಾನು ಬಿಳಿಯರಿಗೆ ಹೇಗೆ ಸುದ್ದಿ ಮುಟ್ಟಿಸುವುದು? ನೀನು ಮೊಣಕಾಲೂರಿ ಎರಡೂ ಕೈಗಳನ್ನು ನೆಲಕ್ಕೂರಿ ಸ್ವಲ್ಪ ಬಗ್ಗಬೇಕು. ನೀನು ನನ್ನ ಕುದುರೆ.'

'ಬಿಲ್ಲ್, ಹುಡುಗನಿಗೆ ಸಹಕಾರ ಕೊಡಪ್ಪ. ಇಲ್ಲಾಂದ್ರೆ ಬೇರೆ ಏನಾದರೂ ರಗಳೆ ಶುರು ಹಚ್ಚಿಕೊಂಡಾನು!' ನಾನು ಬಿಲ್ಲ್‌ನ ಮುಖ ನೋಡದೆಯೇ ಹೇಳಿದೆ.

ಬಿಲ್ಲ್ ಕುದುರೆಯಂತೆ ಮಂಡಿಯೂರಿ ತಯಾರಾದ. ಅವನ ಮುಖ ಬಲೆಯೊಳಗೆ ಸಿಕ್ಕಿಕೊಂಡಿರುವ ಮೊಲದಂತೆ ಕಾಣುತ್ತಿತ್ತು.

'ಬಿಳಿಯರ ಕ್ಯಾಂಪು ಎಷ್ಟು ದೂರದಲ್ಲಿದೆ ಮಗಾ?' ಬಿಲ್ಲ್ ಕೇಳಿದ.

'ತೊಂಬತ್ತು ಮೈಲಿ! ಅಲ್ಲಿಗೆ ಇಂದೇ ಮುಟ್ಟ ಬೇಕಾದರೆ ನೀನು ಇನ್ನೂ ಸ್ವಲ್ಪ ಚುರುಕಾಗಿರಬೇಕು.' ಬಿಲ್ಲನ ಬೆನ್ನ ಮೇಲೆ ಹತ್ತುತ್ತಾ ಹುಡುಗ ಹೇಳಿದ.